



# ಜಂಬೊ ಟೊಮ್ಯಾಟೊ

■ ಪೂರ್ಣಿಮಾ ಆರ್. ಹೆಜಮಾಡಿ

ಹರಿಯಾಣದ ಭಿವಾನಿ ಎಂಬ ಊರಿನ ಉಮೇದ್ ಸಿಂಗ್, ತಮ್ಮ ಕಿಚನ್ ಗಾರ್ಡನ್‌ನಲ್ಲಿ ಮೂವತ್ತಕ್ಕಿಂತ ಹೆಚ್ಚು ವಿಧದ ಟೊಮ್ಯಾಟೊಗಳನ್ನು ಬೆಳೆಯುತ್ತಾರೆ. ಇದರಲ್ಲಿ ಕಪ್ಪು ಟೊಮ್ಯಾಟೊ ಮತ್ತು ಜಂಬೊ ಟೊಮ್ಯಾಟೊ ಪ್ರಮುಖ.

ತಮ್ಮ ಮನೆಯ ಟೆರೇಸ್ ಮೇಲೆ ಎಲ್ಲಾ ವಿಧದ ತರಕಾರಿಗಳನ್ನು ಇವರು ಬೆಳೆಸಿದ್ದಾರೆ. ಹಸಿಮೆಣಸಿನ ಕಾಯಿಯಿಂದ ಹಿಡಿದು ಕುಂಬಳದವರೆಗೂ ಇವರ ಟೆರೇಸ್ ಮೇಲೆ ಬೆಳೆದಿದೆ. ಇದರಲ್ಲಿ ಇವರ ಪತ್ನಿಯ ಕೊಡುಗೆ ಅಪಾರ. ಬ್ಲ್ಯಾಕ್  ಟೊಮ್ಯಾಟೋ ನೋಡಲು ಕಪ್ಪಾಗಿದ್ದರೆ, ಜಂಬೊ ಟೊಮ್ಯಾಟೋ ಹೆಸರೇ ಹೇಳುವಂತೆ, ಅತೀ ದೊಡ್ಡ ಗಾತ್ರದ ಟೊಮ್ಯಾಟೊ. ನಾವು ದಿನ ನಿತ್ಯ ನೋಡುವ ಟೊಮ್ಯಾಟೊ ಸುಮಾರು 50 ರಿಂದ 60 ಗ್ರಾಂ ತೂಗುವುದಾದರೆ ಇವರು ಬೆಳೆದ ಅತಿ ದೊಡ್ಡ ಟೊಮ್ಯಾಟೊ 720 ಗ್ರಾಂ ತೂಗುತ್ತದೆ!

ಈ ಟೊಮ್ಯಾಟೋದ ಬೀಜ ಬಂದಿರುವುದು ಅಮೆರಿಕಾದಿಂದ. ಅಲ್ಲಿನ ಬೀಜ ರಾಸಾಯನಿಕ ಮುಕ್ತವಾಗಿರುತ್ತದೆ ಹಾಗೂ ಅದರಿಂದ ಬೆಳೆದ ಟೊಮ್ಯಾಟೊ ಭಾರತದ ಟೊಮ್ಯಾಟೊಗಿಂತ ಸ್ವಾದಿಷ್ಟವಾಗಿರುತ್ತದೆ ಎನ್ನುತ್ತಾರವರು. ಭಾರೀ ಗಾತ್ರದ ಟೊಮ್ಯಾಟೊ ಬೆಳೆಯುವುದು ಇವರ ಹವ್ಯಾಸ.ವಿವಿಧ ಆಕಾರದ ಟೊಮ್ಯಾಟೊಗಳನ್ನೂ ಬೆಳೆಯುವುದರ ಜೊತೆಗೆ ಸತತ ಪ್ರಯೋಗಗಳನ್ನೂ ಮಾಡುತ್ತಾರೆ. ವಿದೇಶಗಳಿಂದ ಬಂಧು, ಮಿತ್ರರು ತಂದುಕೊಡುವ ತರಕಾರಿ ಬೀಜಗಳನ್ನು ಉಪಯೋಗಿಸಿ ಗಿಡ ಬೆಳೆಸಿ, ಅದರಿಂದ ಇನ್ನಷ್ಟು ಬೀಜಗಳನ್ನು ಮಾಡಿ ಸ್ನೇಹಿತರಿಗೆ 'ಗಿಫ್ಟ್' ಎಂದೂ ಕೊಡುತ್ತಾರೆ.

'ಇಷ್ಟೆಲ್ಲಾ ತರಕಾರಿಗಳಿಗೆ ಸೆಗಣಿ ಗೊಬ್ಬರ, ಕಬ್ಬಿನ ಸಿಪ್ಪೆ ಬಿಟ್ಟು ಇನ್ನೇನೂ ಬಳಸುತ್ತಿಲ್ಲ. ಕಿಚನ್ ಗಾರ್ಡನ್ ಜೊತೆಗೆ ಸಾಸಿವೆ ಹಾಗೂ ಗೋಧಿಯ ಹೊಲವನ್ನೂ ಹೊಂದಿರುವ ಇವರು ರಾಸಾಯನಿಕ ಗೊಬ್ಬರಗಳಿಂದ ಬಲುದೂರ. ಒಂದು ಕಿಲೋ ತೂಗುವ ಟೊಮ್ಯಾಟೊ ಬೆಳೆದು ಗಿನ್ನೆಸ್ ರೆಕಾರ್ಡ್ ಮಾಡುವ ಹಂಬಲ ಇವರದು.



ಉಮೇದ್ ಸಿಂಗ್